ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು- ೫೭೦ ೦೨೫
(ಮೈಸೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಹಾಗೂ ನ್ಯಾಕ್‌ನಿಂದ 'ಎ' ಶ್ರೇಣಿ ಮಾನ್ಯತೆ ಪಡೆದಿದೆ)

☎ : 0821-2548236 & 2548380 ಫ್ಯಾಕ್ಸ್ : 0821-2548238 ಇ-ಅಂಚೆ : jssautonomous@gmail.com ವೆಬ್ ಸೈಟ್ : www.jsscacs.org

ಸಂಖ್ಯೆ: ಜೆಎಸ್‌ಎಸ್‌ಸಿಎಂ/ ದಿನಾಂಕ: 19.10.2012

**<u>ಪ್ರಕಟಣೆಯ ಕೃಪೆಗಾಗಿ</u>**

ಇಂದಿನ ಸಾಮಾಜಿಕ ಸಂದರ್ಭದಲ್ಲಿ ಅರ್ಥಕ್ಕೆ ಕಾಮಕ್ಕೆ ಇರುವಷ್ಟು ಪ್ರಾಧಾನ್ಯತೆ ಧರ್ಮಕ್ಕೆ ಸಿಗುತ್ತಿಲ್ಲ, ಕಲೆ ಮತ್ತು ಸಾಹಿತ್ಯದ ಬಗ್ಗೆ ಜನರಿಗೆ ಆಸಕ್ತಿ ಇಲ್ಲವಾಗುತ್ತಿದ್ದು ಎಲ್ಲವೂ ವ್ಯಾವಹಾರಿಕ ಮತ್ತು ವಾಣಿಜ್ಯೀಕರಣಗೊಳ್ಳುತ್ತಿದೆ ಎಂಬ ಅಂಶವನ್ನು ಖ್ಯಾತ ಸಾಹಿತಿ ಸಿ.ಪಿ.ಕೆ. ಇಂದು ಇಲ್ಲಿ ತಿಳಿಸಿದರು. ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆ ಎಸ್ ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾಯೋಜಿಸಿದ್ದ ಕನ್ನಡ ಕಾವ್ಯ- ವ್ಯಾಖ್ಯಾನ, ರಸಗ್ರಹಣ ಕಮ್ಮಟದ ಉದ್ಘಾಟನಾ ಸಮಾರಂಭದಲ್ಲಿ ಆಶಯ ಭಾಷಣಮಾಡಿ ಮಾತನಾಡಿದ ಅವರು ಕನ್ನಡ ಭಾಷೆಯಲ್ಲಿ ಅತ್ಯಂತ ಶ್ರೀಮಂತವಾದ ಕಾವ್ಯ ಪರಂಪರೆ ಇದೆ ಅದನ್ನು ಅರ್ಥಮಾಡಿಕೊಂಡು ಅನುಭವಿಸಲು ಶ್ರಮ, ಶ್ರದ್ಧೆ, ಆಸ್ಥೆ ಎಲ್ಲವೂ ಮುಖ್ಯ ಎಂದರಲ್ಲದೆ ಈ ನಿಟ್ಟಿನಲ್ಲಿ ಕಾವ್ಯದ ಧ್ವನಿ ಮತ್ತು ಅಂತರಾರ್ಥದ ಅರಿವು ಮೂಡಿಸಲು ವ್ಯವಸ್ಥೆಗೊಳಿಸಿರುವ ಕನ್ನಡ ಕಾವ್ಯದ- ಓದು, ವ್ಯಾಖ್ಯಾನ, ರಸಗ್ರಹಣ ಎಂಬ ಈ ಕಮ್ಮಟ ಒಂದು ಉತ್ತಮ ಪ್ರಯೋಗವಾಗಿದೆ ಎಂದರು.

ಕಮ್ಮಟವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ವಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಮಾತನಾಡಿ ಕಾವ್ಯ ರಚನಾಕಾರನಷ್ಟೇ ರಸಿಕನೂ ಮುಖ್ಯ. ಕವಿಬರೆದದ್ದನ್ನು ಓದಿ ಕೇಳಿ ಆನಂದಿಸುವ ಜನವಿದ್ದಾಗ ಮಾತ್ರ ಕವಿಯ ಶ್ರಮ ಸಾರ್ಥಕವಾಗುತ್ತದೆ, ಆ ದೃಷ್ಟಿಯಿಂದ ಕಾವ್ಯ ಓದು ವ್ಯಾಖ್ಯಾನ ರಸಗ್ರಹಣದ ಕಮ್ಮಟ ಸಾರ್ಥಕವಾಗಲೆಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಮುಖ್ಯಮಂತ್ರಿ ಚಂದ್ರು ಅವರು ಮಾತನಾಡಿ ಒಂದು ಅಂದಾಜಿನ ಪ್ರಕಾರ ಜಗತ್ತಿನಲ್ಲಿ ಸುಮಾರು 6000 ಕ್ಕೂ ಹೆಚ್ಚು ಭಾಷೆಗಳಿದ್ದು ಆ ಪೈಕಿ ಸುಮಾರು ಎರಡುವರೆ ಸಾವಿರದಷ್ಟು ಭಾಷೆಗಳು ಭಾರತದಲ್ಲೇ ಇವೆ; ಅಂತಹ ಭಾಷಾ ಶ್ರೀಮಂತಿಕೆ ನಮ್ಮದು. ಪ್ರಪಂಚದಲ್ಲಿ ಹದಿನೈದು ದಿನಕ್ಕೊಂದರಂತೆ ಭಾಷೆ ಸಾಯುತ್ತಿರುವುದು ದುರಾದೃಷ್ಟಕರ. ಈ ಎಲ್ಲಾ ಭಾಷೆಗಳನ್ನು ರಕ್ಷಿಸಬೇಕಾದ ಜವಾಬ್ದಾರಿ ನಮ್ಮದು. ಆದರೆ ನಮ್ಮ ರಾಜ್ಯದಲ್ಲೇ ನಮ್ಮ ಭಾಷೆಯನ್ನೇ ರಕ್ಷಿಸಿಕೊಳ್ಳಲೆಂದು ಹೋರಾಡಬೇಕಾದ ಪರಿಸ್ಥಿತಿ ನಮ್ಮಲ್ಲಿದೆ, ಅದಕ್ಕಾಗಿ ಪ್ರಾಧಿಕಾರ ಹಮ್ಮಿಕೊಂಡ ವೈವಿಧ್ಯಮಯ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲಿದರು.

ಮೊದಲಿಗೆ ಪ್ರಥಮ ಬಿ.ಎಸ್ಸಿ ವಿದ್ಯಾರ್ಥಿನಿ ಮಾನಸ ಜಿ ಪ್ರಾರ್ಥಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಅತಿಥಿಗಳನ್ನು ಪರಿಚಯಿಸಿ ಸ್ವಾಗತ ಭಾಷಣ ಮಾಡಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪರವಾಗಿ ಕಮ್ಮಟದ ಸಂಚಾಲಕರಾದ ಪ್ರೊ. ಎಂ. ಕೃಷ್ಣೇಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಯೋಜಕರಾದ ಡಾ. ಎಂ.ಸಿ. ಸರೋಜಮ್ಮಣ್ಣಿ ವಂದನಾರ್ಪಣೆ ಮಾಡಿದರು ಹಾಗೂ ಡಾ. ಶೈಲಜಾ ಎಚ್.ಬಿ. ಕಾರ್ಯಕ್ರಮ ನಿರೂಪಿಸಿದರು.

ಪ್ರಾಂಶುಪಾಲರು
ಜೆ. ಎಸ್. ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು

ಗೆ

ಸಂಪಾದಕರು / ವರದಿಗಾರರು

\- - - - - - - - - - - - - - -